**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 351/2019**

ಸಿಡಬ್ಲ್ಯೂಃ 1

ಪಿಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಕಾಶ ಸೂರ್ಯವಂಶಿ |
| ತಂದೆಯ ಹೆಸರು | : | ಭೀಮಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹಳ್ಳೂರು |

ಇಂದು ದಿನಾಂಕಃ 29.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಆರೋಪಿಯು ನನಗೆ ಗೊತ್ತು. 2018 ರಲ್ಲಿ ನಮ್ಮ ಅಕ್ಕ ತೀರಿಕೊಂಡ ಕಾರಣ ತಿಥಿ ಕಾರ್ಯಕ್ರಮಕ್ಕೆ ನಾನು, ನನ್ನ ಹೆಂಡತಿ ಮತ್ತು ನನ್ನ ಮಕ್ಕಳೊಂದಿಗೆ ಬೆಳಿಗ್ಗೆ 9-00 ಗಂಟೆಗೆ ಮನೆಯನ್ನು ಕೀಲಿ ಹಾಕಿ ಹೋಗಿದ್ದೆವು. ಅದೇ ದಿನ ಸಾಯಂಕಾಲ 7-00 ಗಂಟೆಗೆ ನಮ್ಮೂರಿಗೆ ಹಿಂತಿರುಗಿ ಬಂದು, ಅಡುಗೆ ಮಾಡಿ, ಊಟ ಮಾಡಿ ಮಲಗಿಕೊಂಡೆವು. ಮರುದಿನ ಬೆಳಿಗ್ಗೆ ಕುರಿ ತರಬೇಕೆಂದು ಮನೆ ಕೋಣೆಯಲ್ಲಿ ಟ್ರೇಸರಿ ತೆಗೆಯಲು ಹೋದಾಗ ಟ್ರೇಸರಿಯ ಕೀಲಿ ಮುರಿದಿತ್ತು.

2. ಅದರಲ್ಲಿರುವ ಒಂದು ಜೊತೆ ಬಂಗಾರದ ಕಿವಿಯ ಓಲೆಯ ಪ್ಲೇಟ್ ಮತ್ತು ಗುಂಡುಗಳು ಹಾಗೂ ರೂ. 10,000/- ಕಳ್ಳತನವಾಗಿದ್ದವು. ಆಗ ನನ್ನ ಹೆಂಡತಿಗೆ ಟ್ರೇಸರಿಯಿಂದ ಏನಾದರೂ ತೆಗೆದುಕೊಂಡಿದ್ದೀಯಾ ಎಂದು ಕೇಳಿ, ಅವಳು ಇಲ್ಲ ಎಂದು ಹೇಳಿದಳು. ನಂತರ ಅಕ್ಕಪಕ್ಕದ ಮನೆಯವರನ್ನು ವಿಚಾರಿಸಿದಾಗ ಅವರು ಏನು ಗೊತ್ತಿಲ್ಲ ಎಂದು ಹೇಳಿದರು. ಊರಿನ ಜನರು ಫಿರ್ಯಾದಿಯನ್ನು ನೀಡಿದರೆ ನ್ಯಾಯಾಲಯಕ್ಕೆ ಅಲೆದಾಡುವಂತಾಗುತ್ತದೆ ಎಂದು ಹೇಳಿದ್ದರಿಂದ ನಾನು ದೂರನ್ನು ನೀಡಲಿಲ್ಲ. 3 ತಿಂಗಳ ನಂತರ ಶಿಕಾರಿಪುರ ಪೊಲೀಸರು ಆರೋಪಿ ಹಾಗೂ ಇನ್ನೊಬ್ಬ ವ್ಯಕ್ತಿಯನ್ನು ಕರೆದುಕೊಂಡು ನಮ್ಮ ಮನೆಗೆ ಬಂದರು.

3. ಆರೋಪಿಯು ಟ್ರೇಸರಿಯನ್ನು ಗುರುತಿಸಿ, ಕಳ್ಳತನ ಮಾಡಿರುವ ಬಗ್ಗೆ ಒಪ್ಪಿಕೊಂಡರು. ನಂತರ ಪೊಲೀಸರು ನಮಗೆ ಶಿಕಾರಿಪುರ ಪೊಲೀಸ್ ಠಾಣೆಗೆ ಬರಲು ಹೇಳಿದರು. ನಂತರ ನಾನು ಮತ್ತು ನನ್ನ ಹೆಂಡತಿ ಶಿಕಾರಿಪುರ ಪೊಲೀಸ್ ಠಾಣೆಗೆ ಹೋದೆವು. ಅಲ್ಲಿ ಪೊಲೀಸರು ಕಳ್ಳತನವಾದ ಸ್ವತ್ತುಗಳನ್ನು ತೋರಿಸಿ, ನಾವು ಗುರುತಿಸಿದೆವು. ನಂತರ ಪೊಲೀಸರು ರಟ್ಟೀಹಳ್ಳಿ ಠಾಣೆಯಲ್ಲಿ ದೂರನ್ನು ದಾಖಲಿಸಲು ಹೇಳಿದರು. ಆ ದಿನ ತಡವಾಗಿ ಬಂದಿದ್ದರಿಂದ ನಾವು ಮರುದಿನ ದೂರನ್ನು ನೀಡಿರುತ್ತೇವೆ.

4. ಸಾಕ್ಷಿಯು ದೂರಿನ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1ರ ಆಧಾರದ ಮೇಲೆ ತಯಾರಿಸಿದ ಪ್ರ.ವ.ವ. ಮೇಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಪ್ರ.ವ.ವ.ಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ರಟ್ಟೀಹಳ್ಳಿ ಪೊಲೀಸರು ನಮ್ಮ ಮನೆಗೆ ಬಂದು ನೋಡಿ, ನಮಗೆ ರಟ್ಟೀಹಳ್ಳಿ ಪೊಲೀಸ್ ಠಾಣೆಗೆ ಬರಲು ಹೇಳಿದರು.

5. ಪಂಚನಾಮೆ ಕಾಲಕ್ಕೆ ತೆಗೆದ ಪೋಟೋಗಳಲ್ಲಿ ಸಾಕ್ಷಿಯ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ನಮ್ಮ ಮನೆ ಹತ್ತಿರ ತೆಗೆದಿರುತ್ತಾರೆ. ಭಾರತೀಯ ಸಾಕ್ಷ್ಯ ಅಧಿನಿಯಂ ಕಲಂ 65ಬಿ ರಡಿಯಲ್ಲಿ ಪ್ರಮಾಣ ಪತ್ರ ಹಾಗೂ ಸಿಡಿಯನ್ನು ಸಲ್ಲಿಸದ ಕಾರಣ ಸದರಿ ಪೊಟೋಗಳ ಗುರುತಿಸುವಿಕೆಯನ್ನು ಕೈಬಿಡಲಾಯಿತು. ನಂತರ ರಟ್ಟೀಹಳ್ಳಿ ಪೊಲೀಸರು ಸದರಿ ಸ್ವತ್ತುಗಳನ್ನು ನ್ಯಾಯಾಲಯದ ಮುಖಾಂತರ ಪಡೆದುಕೊಳ್ಳಿ ಎಂದು ಹೇಳಿದ್ದರಿಂದ ನಾನು ನ್ಯಾಯಾಲಯದ ಆದೇಶದ ಮೂಲಕ ಸ್ವತ್ತುಗಳನ್ನು ಬಿಡಿಸಿಕೊಂಡಿರುತ್ತೇನೆ.

6. ಸಾಕ್ಷಿಯು ಆಭರಣಗಳ ಬಿಡುಗಡೆ ಪಂಚನಾಮೆ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಪುನರ್ ಹೇಳಿಕೆ ನೀಡಿರುವುದಿಲ್ಲ. ಆರೋಪಿತ ಕೃತ್ಯವೆಸಗಿದ ಸ್ಥಳ ತೋರಿಸಿದ ಪಂಚನಾಮೆ ಮೇಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ-4ರಲ್ಲಿರುವ ಸಹಿಯನ್ನು ನಮ್ಮ ಮನೆಯ ಹತ್ತಿರ ಮಾಡಿರುತ್ತೇನೆ.

7. ನಿಪಿ-4ರ ಕಾಲಕ್ಕೆ ತೆಗೆದ ಫೋಟೋದಲ್ಲಿ ಸಾಕ್ಷಿಯು ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ನಮ್ಮ ಮನೆಯ ಹತ್ತಿರ ತೆಗೆದಿರುತ್ತಾರೆ. ಭಾರತೀಯ ಸಾಕ್ಷ್ಯ ಅಧಿನಿಯಂ ಕಲಂ 65ಬಿ ರಡಿಯಲ್ಲಿ ಪ್ರಮಾಣ ಪತ್ರ ಹಾಗೂ ಸಿಡಿಯನ್ನು ಸಲ್ಲಿಸದ ಕಾರಣ ಸದರಿ ಫೋಟೋವಿನ ಗುರುತಿಸುವಿಕೆಯನ್ನು ಕೈಬಿಡಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಶಿಕಾರಿಪುರ ಪೋಲೀಸರು ಕರೆದುಕೊಂಡು ಬಂದ ವ್ಯಕ್ತಿ ಇವರೇ ಎಂದು ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಆಭರಣಗಳನ್ನು ತರದ ಕಾರಣ ಮತ್ತು ಆಭರಣಗಳ ಫೋಟೋ ಹಾಗೂ ಸಿಡಿ ಇಲ್ಲದ ಕಾರಣ ಮಾನ್ಯ ಎ.ಪಿ.ಪಿ.ಯವರು ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್‌.ಎಫ್‌.ಸಿ.,
ಹಿರೇಕೆರೂರು.